KATK800004422024

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ, ಶಿರಾ**

**ಸಿ.ಸಿ.ನಂಃ 151/2024**

**ಫಿರ್ಯಾದಿ** : ರಾಜ್ಯದ ಪರವಾಗಿ ಶಿರಾ ಪೊಲೀಸರು

**ವಿರುದ್ಧ**

**ಆರೋಪಿತರು** : 1. ಮಹಲಿಂಗಪ್ರಭು ಬಿನ್ ಭೀಮಣ್ಣ, 70 ವರ್ಷ,
2. ಹರೀಶ್ ಬಿನ್ ಮಹಲಿಂಗಪ್ರಭು, 31 ವರ್ಷ,
ಇಬ್ಬರೂ ವಾಸಃ ಕೋಟೆ, ಶಿರಾ ಟೌನ್.

**ದೋಷಾರೋಪಣೆ**

**ಶ್ರೀಮತಿ ಗೀತಾಂಜಲಿ.ಜಿ.** ಬಿ.ಎ., ಎಲ್.ಎಲ್.ಬಿ. ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಶಿರಾ ಆದ ನಾನು ಆರೋಪಿತರಾದ, ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಶಿರಾ ತಾಲ್ಲೂಕು ಕಸಬಾ ಹೋಬಳಿ ಚೆನ್ನನಕುಂಟೆ ಗ್ರಾಮದ ಸರ್ವೆ ನಂ. 189/2 ರ ಜಮೀನಿನ ಬಳಿ ದಿನಾಂಕ 25.01.2024 ರಂದು ಮಧ್ಯಾಹ್ನ 12.00 ಗಂಟೆ ಮಯದಲ್ಲಿ ಆರೋಪಿಗಳಾದ ನೀವು ಸಾಕ್ಷಿ ಸಂಖ್ಯೆ 1 (ಉಮೇಶ) ರವರ ಬಾಬ್ತು ಜಮೀನಿನ ಪಕ್ಕದಲ್ಲಿ ತಂತಿಬೇಲೆ ಹಾಕಲು ಕಲ್ಲುಗೂಟಗಳನ್ನ ನಿಲ್ಲಿಸುತ್ತಿದ್ದಾಗ, ಸಾಕ್ಷಿ ಸಂಖ್ಯೆ 1 ರವರು ಸ್ಥಳಕ್ಕೆ ಬಂದು ಜಮೀನು ಅಳತೆ ಮಾಡಿಸಿ ತಂತಿಬೇಲಿ ಹಾಕಿಕೊಳ್ಳಿ ಎಂದು ಹೇಳಿದಾಗ, ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಸಾಕ್ಷಿ ಸಂಖ್ಯೆ 1 ರವರ ಮೇಲೆ ಗಲಾಟೆಯನ್ನು ಮಾಡಿ, 1 ನೇ ಆರೋಪಿಯಾದ ನೀವು ಏಕಾಏಕಿ ಕೋಲಿನಿಂದ ಸಾಕ್ಷಿ ಸಂಖ್ಯೆ 1 ರವರ ಎಡಗಾಲಿಗೆ, ಬಲಗಾಲಿಗೆ, ಹೊಡೆದು ರಕ್ತಗಾಯಪಡಿಸಿರುತ್ತೀರಿ, ಆ ಮೂಲಕ **ಭಾ.ದಂ.ಸಂ. ಕಲಂ 324 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ 2 ನೇ ಆರೋಪಿಯಾದ ನೀವು ಸಾಕ್ಷಿ ಸಂಖ್ಯೆ 1 ರವರ ಎದೆಯ ಮೇಲೆ ಕುಳಿತುಕೊಂಡು ಕೈ ಮುಷ್ಟಿ ಮಾಡಿ ಎಡಮುಖಕ್ಕೆ ಬಲವಾಗಿ ಗುದ್ದಿ

ನೋವುಂಟು ಮಾಡಿರುತ್ತೀರಿ. ಆ ಮೂಲಕ **ಭಾ.ದಂ.ಸಂ. ಕಲಂ 323 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವುಗಳು ಸಾಕ್ಷಿ ಸಂಖ್ಯೆ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತೀರಿ. ಆ ಮೂಲಕ **ಭಾ.ದಂ.ಸಂ. ಕಲಂ 504 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ವೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ ಆರೋಪಿಗಳಾ ನೀವುಗಳು ಸಾಕ್ಷಿ ಸಂಖ್ಯೆ 1 ರವರಿಗೆ ಪ್ರಾಣಬೆದರಿಕೆಯನ್ನು ಹಾಕಿರುತ್ತೀರಿ. ಆ ಮೂಲಕ **ಭಾ.ದಂ.ಸಂ. ಕಲಂ 506 ಸಹ ಕಲಂ 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿಗಳಾದ ನೀವುಗಳು ಸಾಕ್ಷಿ ಸಂಖ್ಯೆ 1 ರವರ ಮನೆಯ ಬಳಿಗೆ ಬೇರೆಯವರನ್ನು ಕಳುಹಿಸಿ ಗಲಾಟೆ ಮಾಡಲು ಕುಮ್ಮಕ್ಕು ನೀಡಿರುತ್ತೀರಿ. **ಆ ಮೂಲಕ ಭಾ.ದಂ.ಸಂ. ಕಲಂ 114 ಮತ್ತು ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.**

ಈ ಮೇಲ್ಕಂಡ ಅಪರಾಧವು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುವುದರಿಂದ ನಿಮ್ಮ ವಿಚಾರಣೆ ಇದೇ ನ್ಯಾಯಾಲಯದಲ್ಲಿ ನಡೆಯುವಂತೆ ನಿರ್ದೇಶಿಸಲಾಗಿದೆ.

ದಿನಾಂಕಃ 11.11.2024.

**(ಗೀತಾಂಜಲಿ.ಜಿ)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಶಿರಾ.